ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ

ಸ್ಪೆಷಲ್ ಕೇಸ್ ನಂಃ 56/2016 ಪಿ.ಡಬ್ಲ್ಯುಃ 4

ಸಿ.ಡಬ್ಲ್ಯುಃ 1

| | |
|---|---|
| ಸಾಕ್ಷಿದಾರರ ಹೆಸರು | ಮಹೇಶ್ ಪ್ರಸಾದ್ |
| ತಂದೆಯ ಹೆಸರು | ರಘು ನಾಯಕ್ |
| ವಯಸ್ಸು | 44 ವರ್ಷ |
| ಉದ್ಯೋಗ | ಪೊಲೀಸ್ ನಿರೀಕ್ಷಕರು,<br>ಸುರತ್ಕಲ್ ಪೊಲೀಸ್ ಠಾಣೆ |
| ವಿಳಾಸ | ಸುರತ್ಕಲ್ |

ದಿನಾಂಕಃ 11-10-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು 23-02-2015 ರಿಂದ 09-05-2015 ರವರೆಗೆ ಮಣಿಪಾಲ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕನೆಂದು ಕೆಲಸ ಮಾಡಿರುತ್ತೇನೆ.

2) ದಿನಾಂಕ 18-03-2015 ರಂದು ಬೆಳಿಗ್ಗೆ 4 ಗಂಟೆಗೆ ನಾನು ಮನೆಯಲ್ಲಿ ವಿಶ್ರಾಂತಿಯಲ್ಲಿದ್ದಾಗ ದೂರವಾಣಿ ಮೂಲಕ ಮಣಿಪಾಲದ ಅದಿತಿ ಅಪಾರ್ಟಮೆಂಟ್ ನ ರೂಮ ನಂಬ್ರ 02 ರಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿರುವರು ಎಂದು ಖಚಿತ ಮಾಹಿತಿ ಬಂದಿರುತ್ತದೆ. ನಾನು ಠಾಣೆಗೆ ಬಂದು ನಾನು ಉಡುಪಿ ಪೊಲೀಸ್ ಉಪಾಧೀಕ್ಷಕರಿಗೆ ಸದರಿ ಅಪಾರ್ಟಮಂಟ್‌ನ ಶೋಧನೆ ಮಾಡಲು ಶೋಧನಾ ವಾರಂಟ್ ನೀಡುವಂತೆ ಮನವಿ ಕೊಟ್ಟಿರುತ್ತೇನೆ. ಈಗ ನೋಡಿದ ಮನವಿ ಅದೇ ಇದ್ದು ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಮನವಿಯನ್ನು ನಿಶಾನೆ ಪಿ.5, ಸಾಕ್ಷಿಯ ಸಹಿಯನ್ನು ನಿಶಾನೆ ಪಿ.5(ಎ) ಎಂದು ಗುರುತಿಸಿತು. ಸದರಿ ಮನವಿಯಂತೆ ಪೊಲೀಸ್ ಉಪಾಧೀಕ್ಷಕರು ಕೊಟ್ಟ ಶೋಧನಾ ವಾರಂಟನ್ನು ಪಡೆದುಕೊಂಡಿರುತ್ತೇನೆ. ಈಗ ನೋಡಿದ ಶೋಧನಾ ವಾರಂಟ ಅದೇ ಇದ್ದು ಅದನ್ನು ನಿಶಾನೆ ಪಿ.6 ಎಂದು ಗುರುತಿಸಿತು.

3) ಸದರಿ ಶೋಧನಾ ಸಮಯದಲ್ಲಿ ಪತ್ರಾಂಕಿತ ಅಧಿಕಾರಿಯಾಗಿ ಹಾಜರಿದ್ದು ಶಂಕಿತನ ಅಂಗಶೋಧನೆಗೆ ಸಹಕರಿಸಲು ಬರಬೇಕೆಂದು ತಹಶೀಲ್ದಾರ್ ಉಡುಪಿ ಇವರಿಗೆ ಮೌಖಿತಕವಾಗಿ

ಕೇಳಿದೆನು. ನಂತರ ಸಿಬ್ಬಂದಿ ಮೂಲಕ ಇಬ್ಬರು ಪಂಚರನ್ನು ಕರೆಸಿಕೊಂಡೆನು. ಠಾಣೆಗೆ ಬಂದು ಚಾಸಾ -19 ಮತ್ತು 21 ಇವರಿಗೆ ತನಿಖೆಯಲ್ಲಿ ಸಹಕರಿಸಲು ಲಿಖಿತವಾಗಿ ನೋಟಿಸು ಕೊಟ್ಟಿರುತ್ತೇನೆ. ಈಗ ನೋಡಿದ ಮೂರು ನೋಟಿಸುಗಳು ಅವೇ ಇದ್ದು ಅವುಗಳ ಮೇಲೆ ನನ್ನ ಸಹಿಗಳು ಇರುತ್ತವೆ. ಈಗಾಗಲೇ ಒಂದು ನೋಟಿಸ್ಸನ್ನು ನಿಪಿ-1 ಎಂದು ಗುರುತಿಸಲಾಗಿದ್ದು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈಗ ನೋಡಿದ ಎರಡು ನೋಟಿಸುಗಳು ಅವೇ ಇದ್ದು ಅದನ್ನು ನಿಶಾನೆ ಪಿ -7, ಮತ್ತು 8 ಎಂದು ಗುರುತಿಸಿತು. ಸಾಕ್ಷಿ ಸಹಿಗಳನ್ನು ನಿಪಿ-7(ಎ) ಮತ್ತು 8(ಎ) ಎಂದು ಗುರುತಿಸಿತು.

4) ನಂತರ ಚಾಸಾ -19 ರಿಂದ 21 ಹಾಗೂ ಪೊಲೀಸ್ ಸಿಬ್ಬಂದಿಗಳೊಡನೆ ಬೆಳಿಗ್ಗೆ 5-40 ಕ್ಕೆ ಠಾಣೆಯಿಂದ ಹೊರಟು ಅದಿತಿ ಅಪಾರ್ಟಮೆಂಟ್ ನ ರೂಮ ನಂಬ್ರ 2 ಕ್ಕೆ ಹೋಗಿ ಮುಟ್ಟಿದೆವು. ಬಾಗಿಲಿನ ಕರೆಗಂಟೆ ಒತ್ತಿದಾಗ ಇಂದು ನ್ಯಾಯಾಲಯದ ಮುಂದೆ ಇರುವ ಆರೋಪಿ ಬಾಗಿಲನ್ನು ತೆಗೆದಿರುತ್ತಾನೆ. ಸದರಿ ಆರೋಪಿಗೆ ವಿಚಾರಿಸಲಾಗಿ ತನ್ನ ಹೆಸರು ಮತ್ತು ವಿಳಾಸ ಹೇಳಿರುತ್ತಾನೆ. ಆರೋಪಿ ಮೂಲತಃ ಜಾರ್ಖಂಡ್ ರಾಜ್ಯದ ಜಮಶೆಡ್‌ಪುರದವನಿದ್ದು ಆ ಸಮಯದಲ್ಲಿ ಸದರಿ ಅಪಾರ್ಟಮೆಂಟ್ ನಲ್ಲಿ ವಾಸವಾಗಿರುವುದಾಗಿ ಹೇಳಿರುತ್ತಾನೆ. ಆರೋಪಿಗೆ ತಮ್ಮ ಗುರುತು ಹೇಳಿ ಒಳಗೆ ಹೋಗಿ ನೋಡಲಾಗಿ ಒಟ್ಟು 3 ಕೋಣೆಗಳು ಇದ್ದು ಎರಡರಲ್ಲಿ ಯಾರೂ ಇರಲಿಲ್ಲ ಒಂದು ಕೋಣೆಯಲ್ಲಿ ಆರೋಪಿ ಮತ್ತು ಆತನೊಡನೆ ಚಾಸಾ -18 ಇದ್ದರು. ಪಂಚರ ಎದುರಿಗೆ ಸದರಿ ಕೋಣೆಯನ್ನು ಶೋದನೆ ಮಾಡಿ ನೋಡಲಾಗಿ ಅಲ್ಮೆರಾದಲ್ಲಿ ಗಾಂಜಾ ಮತ್ತು ಹಣ ಇದ್ದದ್ದು ಕಂಡುಬಂದಿತು.

5) ಸದರಿ ವಿಷಂದುವಾಗಿ ಆರೋಪಿತನಿಗೆ ವಿಚಾರಿಸಿದಾಗ ತಾನು ಹಣ ಸಂಪಾದಿಸಲು ಮೈಸೂರಿನ ಜಾಪರ್ ಎನ್ನುವಾತನಿಂದ ಗಾಂಜಾ ತರಿಸಿಕೊಂಡು ಮಣಿಪಾಲ ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿರುವುದಾಗಿ ಒಪ್ಪಿಕೊಂಡಿರುತ್ತಾನೆ. ಸದರಿ ಅಲ್ಮೆರಾವನ್ನು ಕೂಲಂಕುಷವಾಗಿ ನೋಡಿದಾಗ ಗಾಂಜಾದ 50 ಚಿಕ್ಕ ಪೊಟ್ಟಣಗಳು ಇದ್ದವು. ಆರೋಪಿ ಸದರಿ ಪೊಟ್ಟಣಗಳನ್ನು ತಾನು ಪ್ರತೀ ಪೊಟ್ಟಣಕ್ಕೆ ರೂಪಾಯಿ 500 ರಂತೆ ಮಾರಾಟ ಮಾಡುತ್ತಿರುವುದಾಗಿ ಒಪ್ಪಿಕೊಂಡಿರುತ್ತಾನೆ. ಸದರಿ ಅಲ್ಮೆರಾದಲ್ಲಿದ್ದ ರೂಪಾಯಿ 5 ಸಾವಿರ ಗಾಂಜಾ ಮಾರಾಟದಿಂದ ಬಂದದ್ದು ಎಂದು ಹೇಳಿರುತ್ತಾನೆ. ಅಲ್ಮೆರಾದಲ್ಲಿದ್ದ ಎಲೆಕ್ಟ್ರಾನಿಕ್ ತೂಕತ್ತೂಕದ ಯಂತ್ರವು ಸದರಿ ಗಾಂಜಾವನ್ನು ತೂಕ ಮಾಡಿ ಪೊಟ್ಟಣ ತಯಾರಿಸಲು ಬಳಸುತ್ತಿದ್ದುದಾಗಿ ಆರೋಪಿ ಒಪ್ಪಿಕೊಂಡಿರುತ್ತಾನೆ. ನಂತರ ಚಾಸಾ

-19 ಇವರ ಮೂಲಕ ಆರೋಪಿಯ ಮೊಬೈಲ್ ಫೋನ್ ಅನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುತ್ತೇವೆ.

6) ಆರೋಪಿಯು ಸದರಿ ಕೋಣೆಯ ಪಶ್ಚಿಮದ ದಿಕ್ಕಿನಲ್ಲಿದ್ದ ಬಾಲ್ಕನಿಗೆ ಕರೆದುಕೊಂಡು ಹೋಗಿ ಎರಡು ಕುಂಡಗಳಲ್ಲಿ ಬೆಳೆದಿದ್ದ ಎರಡು ಗಾಂಜಾ ಗಿಡಗಳನ್ನು ತೋರಿಸಿರುತ್ತಾನೆ. ಸದರಿ ಗಾಂಜಾ ಗಿಡಗಳನ್ನು ಕುಂಡಗಳಿಂದ ಕಿತ್ತು ತನಿಖೆಗೆ ತಮ್ಮ ವಶಕ್ಕೆ ಪಂಚರ ಎದುರಿಗೆ ಪಂಚನಾಮೆ ಮಾಡಿ ವಶಕ್ಕೆ ತೆಗೆದುಕೊಂಡಿರುತ್ತೇವೆ. ಅಲ್ಮೆರಾದಲ್ಲಿದ್ದ 50 ಗಾಂಜಾ ಪೊಟ್ಟಣಗಳನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಹೊಲಿದು ಅರಗು ಸೀಲು ಮಾಡಿ ಎ ಎಂದು ಗುರುತಿಸಿ ಅದಕ್ಕೆ ಪಂಚರ ಮತ್ತು ನನ್ನ ಸಹಿ ಇರುವ ಚೀಟಿ ಅಂಟಿಸಿರುತ್ತೇನೆ. ಅದೇ ರೀತಿ ಹಣವನ್ನು ಒಂದು ಖಾಕಿ ಕವರಿನಲ್ಲಿ ಹಾಕಿ ಅದನ್ನು ಬಿ ಎಂದು ಗುರುತಿಸಿ ಪಂಚರ ಮತ್ತು ನನ್ನ ಸಹಿ ಇರುವ ಚೀಟಿ ಅಂಟಿಸಿರುತ್ತೇನೆ. ಈಗ ನೋಡಿದ ಹಣ ಅದೇ ಇದ್ದು ಅದನ್ನು ಎಂಒ -52 ಎಂದು ಗುರುತಿಸಿತು. ಎಲೆಕ್ಟ್ರಾನಿಕ ತೂಕದ ಯಂತ್ರವನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಹೊಲಿದು ಅರಗು ಸೀಲು ಮಾಡಿ ಸಿ ಎಂದು ಗುರುತಿಸಿ ಅದಕ್ಕೆ ಪಂಚರ ಮತ್ತು ನನ್ನ ಸಹಿ ಇರುವ ಚೀಟಿ ಅಂಟಿಸಿರುತ್ತೇನೆ. ಈಗ ನೋಡಿದ ಎಲೆಕ್ಟ್ರಾನಿಕ್ ತೂಕದ ಯಂತ್ರ ಅದೇ ಇದ್ದು ಅದನ್ನು ಎಂಒ -53 ಎಂದು ಗುರುತಿಸಿತು. ಅದೇ ರೀತಿ ಮೊಬೈಲ್ ಫೋನ್ ಅನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಹೊಲಿದು ಅರಗು ಸೀಲು ಮಾಡಿ ಡಿ ಎಂದು ಗುರುತಿಸಿ ಅದಕ್ಕೆ ಪಂಚರ ಮತ್ತು ನನ್ನ ಸಹಿ ಇರುವ ಚೀಟಿ ಅಂಟಿಸಿರುತ್ತೇನೆ. ಈಗ ನೋಡಿದ ಮೊಬೈಲ್ ಫೋನ್ ಅದೇ ಇದ್ದು ಅದನ್ನು ಎಂಒ -54 ಎಂದು ಗುರುತಿಸಿತು. ಎಂಒ -54 ರ ಹಿಂಭಾಗಕ್ಕೆ ಹಾಕಿದ್ದ ಪ್ಲಾಸ್ಟಿಕ್ ಕವರ್ ಪುಡಿ ಪುಡಿಯಾಗಿದ್ದು ಮೊಬೈಲ್ ಫೋನ್ ನ ಬ್ಯಾಟರಿ ಉಬ್ಬಿಕೊಂಡು ಹಾಳಾಗಿರುತ್ತದೆ.

7) ಮಣ್ಣಿನ ಕುಂಡದಿಂದ ತೆಗೆದುಕೊಂಡಿದ್ದ ಗಾಂಜಾ ಗಿಡಗಳನ್ನು ಸಹ ಬಿಳಿ ಬಟ್ಟೆಯಲ್ಲಿ ಸುತ್ತಿ ಹೊಲಿದು ಅರಗು ಸೀಲು ಮಾಡಿ ಎ-51 ಎಂದು ಗುರುತಿಸಿ ಅದಕ್ಕೆ ಪಂಚರ ಮತ್ತು ನನ್ನ ಸಹಿ ಇರುವ ಚೀಟಿ ಅಂಟಿಸಿರುತ್ತೇನೆ. ಸದರಿ ದಿನ ವಶಪಡಿಸಿಕೊಂಡಿದ್ದ 50 ಗಾಂಜಾ ಪೊಟ್ಟಣಗಳು ಮತ್ತು ಗಿಡಗಳನ್ನು ನೋಡಿದಲ್ಲಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಎಂಒ -1 ರಿಂದ 51 ಎಂದು ಗುರುತಿಸಲಾಗಿದೆ.

8) ನಂತರ ಆರೋಪಿಯನ್ನು ಅಲ್ಲಿಯೇ ಬಂಧಿಸಿ ಈ ಬಗ್ಗೆ ಬೆಳಗ್ಗಿನ 6 ಗಂಟೆಯಿಂದ 9-30 ಗಂಟೆಯವರಗೆ ಸ್ಥಳದಲ್ಲಿ ಪಂಚನಾಮೆ ಬರೆದು ಚಾಸಾ -19 ರಿಂದ 21 ಇವರ ಸಹಿಗಳನ್ನು ಪಡೆದುಕೊಂಡಿರುತ್ತೇನೆ. ಈಗ ನೋಡಿದ ಪಂಚನಾಮೆ ನಿಪಿ-1 ಅದೇ ಇದ್ದು ಅದರ ಮೇಲಿನಸಾಕ್ಷಿ

ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಿತು. ಆರೋಪಿ ಮತ್ತು ವಶಪಡಿಸಿಕೊಂಡ ಮುದ್ದೆಮಾಲುಗಳೊಡನೆ ಮಣಿಪಾಲ ಪೊಲೀಸ್ ಠಾಣೆಗೆ ಬಂದು ಸರಕಾರದ ಪರವಾಗಿ ದೂರನ್ನು ನಾನೇ ಸ್ವತಃ ಠಾಣಾ ಗುನ್ನಾ ಸಂಖ್ಯೆ 36/2015 ಕ್ಕೆ ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆನು. ಈಗ ನೋಡಿದ ದೂರು ಅದೇ ಇದ್ದು ಅದನ್ನು ನಿಶಾನೆ ಪಿ -9, ಸಾಕ್ಷಿ ಸಹಿಯನ್ನು ನಿಪಿ -9(ಎ) ಎಂದು ಗುರುತಿಸಿತು. ಪ್ರಥಮ ಮಾಹಿತಿ ವರದಿಯನ್ನು ನಿಪಿ -10, ಸಾಕ್ಷಿ ಸಹಿಯನ್ನು ನಿಪಿ -10(ಎ) ಎಂದು ಗುರುತಿಸಿತು.

9) ದಾಳಿ ಮಾಡಿ ಪಂಚನಾಮೆ ಮಾಡಿದ ಕಾಲಕ್ಕೆ ನಾಲ್ಕು ಪೋಟೋಗಳನ್ನು ತೆಗೆದಿರುತ್ತದೆ. ಈಗ ನೋಡಿದ ಪೋಟೋಗಳು ಅವೇ ಇದ್ದು ಅವುಗಳನ್ನು ನಿಶಾನೆ ಪಿ -11 ರಿಂದ 14 ಎಂದು ಗುರುತಿಸಿತು. ವಶಪಡಿಸಿಕೊಂಡ ಮುದ್ದೆಮಾಲುಗಳನ್ನು ಠಾಣಾ ಸ್ವತ್ತು ಪಟ್ಟಿ ಸಂಖ್ಯೆ 45/2015 ಗೆ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿದೆನು. ಆರೋಪಿಯನ್ನು ವಿಚಾರಿಸಿ ಆತ ಕೊಟ್ಟ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡೆನು. ಆರೋಪಿತನು ಗಾಂಜಾ ಸೇವಿಸಿರುವನೋ ಹೇಗೆ ಎಂದು ಖಚಿತಪಡಿಸಿಕೊಳ್ಳಲು ಮಣಿಪಾಲ ಆಸ್ಪತ್ರೆಯ ವೈದ್ಯಾಧಿಕಾರಿಗಳ ಮುಂದೆ ಮನವಿ ಸಮೇತ ಹಾಜರುಪಡಿಸಿದೆನು. ಆಸ್ಪತ್ರೆಯಿಂದ ಮರಳಿ ಬಂದ ನಂತರ ಆರೋಪಿಯನ್ನು ನ್ಯಾಯಾಲಯದ ಮುಂದೆ ರಿಮಾಂಡ್ ಮನವಿಯೊಡನೆ ಹಾಜರುಪಡಿಸಿರುತ್ತೇನೆ. ನಂತರ ಸಾಕ್ಷಿದಾರರಾದ ಚಾಸಾ -9 ರಿಂದ 16 ಮತ್ತು 18 ಇವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡೆನು. ಆರೋಪಿಯು ತಾನು ಚಾಸಾ -9 ರಿಂದ 16 ಇವರಿಗೆ ಗಾಂಜಾ ಮಾರಾಟ ಮಾಡಿದ್ದಾಗಿ ಸ್ವಖುಪಿ ಹೇಳಿಕೆಯಲ್ಲಿ ಹೇಳಿದ್ದರಿಂದ ಅವರನ್ನು ವಿಚಾರಿಸಿ ಅವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಚಾ ಸಾ -9 ರಿಂದ 16 ಮಣಿಪಾಲ ತಾಂತ್ರಿಕ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ಇದ್ದರು.

10) ದಿನಾಂಕ 19-03-2015 ರಂದು ತನಿಖಾ ಕಾಲದಲ್ಲಿ ದಾಳಿಯಲ್ಲಿ ಸಹಕರಿಸಿದ ಸಿಬ್ಬಂದಿಗಳಾದ ಚಾಸಾ -2 ರಿಂದ 8 ಇವರ ಹೇಳಿಕೆಗಳನ್ನು ದಾಖಲಿಸಿಕೊಂಡೆನು.

11) ದಿನಾಂಕ 14-03-2015 ರಂದು ಈ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಗಾಂಜಾ ಪೊಟ್ಟಣಗಳನ್ನು ಮತ್ತು ಗಿಡಗಳನ್ನು ರಾಸಾಯನಿಕ ಪರೀಕ್ಷೆ ಮತ್ತು ವರದಿಗಾಗಿ ಮಂಗಳೂರಿನ ಆರ್ ಎಫ್ ಎಸ್ ಎಲ್ ಗೆ ಸಿಬ್ಬಂದಿ ಮೂಲಕ ಕಳುಹಿಸಿಕೊಟ್ಟೆನು. ಅದೇ ದಿನ ಮಣಿಪಾಲ ಕೆಎಂಸಿ ಆಸ್ಪತ್ರೆಯಿಂದ ಆರೋಪಿ ಗಾಂಜಾ ಸೇವಿಸಿರುವನು ಎಂದು ಬಂದ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಈಗ ನೋಡಿದ ನಿಪಿ-3 ಅದೇ ಇರುತ್ತದೆ. ನನಗೆ ವರ್ಗಾವಣೆಯಾದ

ಕಾರಣ ಮುಂದಿನ ತನಿಖೆಯನ್ನು ಚಾಸಾ -27 ಇವರಿಗೆ ವಹಿಸಿಕೊಟ್ಟಿರುತ್ತೇನೆ. ನಿಶಾನೆ ಪಿ -2 ರಲ್ಲಿ ದಿನಾಂಕವು 10-02-2015 ಎಂದು ತಪ್ಪಾಗಿ ಬೆರಳಚ್ಚು ಆಗಿರುತ್ತದೆ.

**ಪಾಟೀಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಎ. ವಕೀಲರಿಂದ**

1) ಖಚಿತ ಮಾಹಿತಿ ಬಂದ ನಂತರ ಠಾಣೆಗೆ ಬಂದು ನಾನು ಬೆಳಗ್ಗಿನ 4-30 ಗಂಟೆಗೆ ಮೇಲಾಧಿಕಾರಿಗಳಿಗೆ ಪ್ರಕರಣದಲ್ಲಿ ದಾಳಿ ಮಾಡಿ ತನಿಖೆ ಮಾಡಲು ಅನುಮತಿ ಕೇಳಿ ಮನವಿ ಕಳುಹಿಸಿರುತ್ತೇನೆ. ಬೆಳಗ್ಗಿನ 5-30 ಗಂಟೆಗೆ ಮೇಲಾಧಿಕಾರಿಗಳಿಂದ ನನಗೆ ದಾಳಿ ಮಾಡಿ ತನಿಖೆ ಮಾಡಲು ನನಗೆ ಲಿಖಿತವಾಗಿ ಅನುಮತಿ ಬಂದಿರುತ್ತದೆ. ನಾನು ಬೆಳಗ್ಗಿನ 5-30 ಗಂಟೆಗೆ ಅನುಮತಿ ಬಂದಿದೆ ಎಂದು ಅದರ ಮೇಲೆ ಷರಾ ಬರೆದಿರುವುದಿಲ್ಲ. ಚಾಸಾ -19 ಠಾಣೆಗೆ ಬಂದ ನಂತರ ಬೆಳಗ್ಗಿನ 5-45 ಗಂಟೆಗೆ ನೋಟಿಸು ಕೊಟ್ಟಿರುತ್ತೇನೆ. ಚಾಸಾ -20 ಮತ್ತು 21 ಬೆಳಗ್ಗಿನ ಸುಮಾರು 5-30 ಗಂಟೆಗೆ ಠಾಣೆಗೆ ಬಂದಿರುತ್ತಾರೆ. ಚಾಸಾ -20 ಮತ್ತು 21 ಇವರಿಗೆ ಬೆಳಗ್ಗಿನ 5-30 ಗಂಟೆಗೆ ನೋಟಿಸು ಕೊಟ್ಟಿರುತ್ತೇನೆ. ಬೆಳಗ್ಗಿನ 5-30 ಗಂಟೆಗೆ ಚಾಸಾ -20 ಮತ್ತು 21 ಇವರಿಗೆ ನೋಟಿಸು ಕೊಟ್ಟ ಬಗ್ಗೆ ನೋಟಿಸಿನಲ್ಲಿ ಉಲ್ಲೇಖ ಇರುವುದಿಲ್ಲ.

2) ಆದಿತಿ ಅಪಾರ್ಟಮೆಂಟ್ ಒಟ್ಟು ಮೂರು ಮಹಡಿಗಳನ್ನು ಹೊಂದಿರಬಹುದಾಗಿದ್ದು ಈಗ ನಿಖರವಾಗಿ ಹೇಳಲು ಬರುವುದಿಲ್ಲ. ಸದರಿ ಅಪಾರ್ಟಮೆಂಟ್ ನ ಯಾವ ಮಹಡಿಗಳಲ್ಲಿ ಒಟ್ಟು ಎಷ್ಟು ಪ್ಲ್ಯಾಟ್ ಗಳು ಇರುತ್ತವೆ ಮತ್ತು ಅವುಗಳಿಗೆ ಏನು ಸಂಖ್ಯೆ ಕೊಟ್ಟಿದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ದಾಳಿ ಮಾಡಿದ ಪ್ಲ್ಯಾಟ್ ಇರುವ ಮಹಡಿಯಲ್ಲಿ ಎಷ್ಟು ಪ್ಲ್ಯಾಟ್ ಗಳು ಇರುತ್ತವೆ ಎಂದು ನನಗೆ ಈಗ ಹೇಳಲು ಬರುವುದಿಲ್ಲ. ಸದರಿ ಸಮಯದಲ್ಲಿ ಅಪಾರ್ಟಮೆಂಟ್ ಗೆ ಸಿಸಿ ಕ್ಯಾಮರಾ ಅಳವಡಿಸಿದ್ದರೋ ಹೇಗೇ ಎಂದು ನಾನು ನೋಡಿರುವುದಿಲ್ಲ. ಸದರಿ ಅಪಾರ್ಟಮೆಂಟ್ ಕಟ್ಟಡಕ್ಕೆ ರಕ್ಷಣಾ ಸಿಬ್ಬಂದಿಯ ನೇಮಕ ಆಗಿರುತ್ತದೆ. ಸದರಿ ದಿನ ದಾಳಿ ಮಾಡಿದಾಗ ನಮ್ಮ ಸಿಬ್ಬಂದಿ ಪ್ರಸನ್ನ ಪೋಟೋ ತೆಗೆದಿರುತ್ತಾನೆ. ಪ್ರಸನ್ನ ದಾಳಿಗೆ ಹೋಗಿದ್ದ ಎಲ್ಲಾ ಸಿಬ್ಬಂದಿ ಮತ್ತು ಪಂಚರ ಪೋಟೋ ತೆಗೆದಿರುವುದಿಲ್ಲ. ಸದರಿ ಪೋಟೋಗಳಲ್ಲಿ ಯಾವ ಅಪಾರ್ಟಮೆಂಟ್ ನ ಯಾವ ಪ್ಲ್ಯಾಟ್ ದ್ದು ಇರುತ್ತದೆ ಎಂದು ಕಂಡುಬರುವುದಿಲ್ಲ. ಸದರಿ 4 ಪೋಟೋಗಳಲ್ಲಿ ನಾನು , ಸಿಬ್ಬಂದಿಗಳು ಮತ್ತು ಚಾಸಾ -19 ರಿಂದ 21 ಕಂಡುಬರುವುದಿಲ್ಲ. ಸದರಿ ಪೋಟೋಗಳನ್ನು ಸ್ಥಳದಲ್ಲಿ ತೆಗೆದಿರುವುದಿಲ್ಲ, ಠಾಣೆಯಲ್ಲಿ ತಯಾರು ಮಾಡಲಾಗಿದೆ ಎನ್ನುವುದು ಸರಿಯಲ್ಲ.

3) ಸದರಿ ದಿನ ದಾಳಿ ಅರಂಭಿಸುವ ಮೊದಲು ಚಾಸಾ -19 ಇವರ ಎದುರಿಗೆ ನಾವು ಪೊಲೀಸರ ಮತ್ತು ಪಂಚರ ಅಂಗ ಶೋಧನೆಯನ್ನು ಮಾಡಿಕೊಂಡಿರುತ್ತೇವೆ. ಸದರಿ ದಾಳಿ ಮಾಡಿದಾಗ ಆರೋಪಿ ಮತ್ತು ಚಾಸಾ -18 ಇವರ ಅಂಗ ಶೋಧನೆಯನ್ನು ಮಾಡಿರುವುದಿಲ್ಲ. ಸದರಿ ದಿನ ಎಂಒ -1 ರಿಂದ 51 ಪೊಟ್ಟಣಗಳಿಗೆ ಪ್ರತ್ಯೇಕವಾಗಿ ಪಂಚರ ಮತ್ತು ನನ್ನ ಸಹಿ ಇರುವ ಚೀಟಿ ಅಂಟಿಸಿರುತ್ತೇವೆ. ಸದರಿ ಚೀಟಿಗಳ ಮೇಲೆ ಇರುವ ಬರಹಗಳನ್ನು ಮತ್ತು ಸಹಿಗಳನ್ನು ಸ್ಥಳದಲ್ಲಿ ಪಡೆದುಕೊಂಡಿರುತ್ತೇವೆ.

4) ಸದರಿ ದಿನ ಬೆಳಗ್ಗಿನ 10 ಗಂಟೆಗೆ ಠಾಣೆಯಲ್ಲಿ ಆರೋಪಿ ಮೇಲೆ ದೂರು ದಾಖಲಿಸಿರುತ್ತೇನೆ. ಸದರಿ ದಿನ ದಾಳಿಗೆ ಹೋಗುವಾಗ ಎಲೆಕ್ಟ್ರಾನಿಕ್ ತೂಕದ ಯಂತ್ರವನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತೇವೆ. ಸದರಿ ದಿನ ಫ್ಲ್ಯಾಟ್ ನಲ್ಲಿ ದೊರಕಿದ ತೂಕದ ಯಂತ್ರ ಯಾವ ಕಂಪೆನಿಯದ್ದು ಮತ್ತು ಗರಿಷ್ಟ ಪ್ರಮಾಣದ ತೂಕದ ಬಗ್ಗೆ ಮತ್ತು ಅದರ ಉದ್ದಳತೆಯ ಬಗ್ಗೆ ಪಂಚನಾವೆಯಲ್ಲಿ ಬರೆದಿರುವುದಿಲ್ಲ. ಠಾಣೆಯಲ್ಲಿದ್ದ ತೂಕದ ಯಂತ್ರವನ್ನು ಈ ಪ್ರಕರಣದಲ್ಲಿ ಸುಳ್ಳು ಸೇರಿಸಿದ್ದೇವೆ ಎನ್ನುವುದು ಸರಿಯಲ್ಲ. ಸದರಿ ದಿನ ವಶಪಡಿಸಿಕೊಂಡ ರೂಪಾಯಿ 5 ಸಾವಿರದಲ್ಲಿ ಯಾ ಬೆಲೆಯ ಎಷ್ಟು ನೋಟುಗಳು ಇದ್ದವು ಎಂದು ಮತ್ತು ಅವುಗಳ ಕ್ರಮ ಸಂಖ್ಯೆಯನ್ನು ಪಂಚನಾಮೆಯಲ್ಲಿ ಬರೆದಿರುವುದಿಲ್ಲ. ಕೋಣೆಯ ಟೇಬಲ್ ನಲ್ಲಿದ್ದ ಮೊಬೈಲ್ ಪೋನ್ ಅನ್ನು ಚಾಸಾ -19 ವಶಪಡಿಸಿಕೊಂಡಿರುತ್ತಾರೆ.

5) ಸದರಿ ಫ್ಲ್ಯಾಟ್ ನಲ್ಲಿ ಕೇವಲ ಎರಡು ಹೂವಿನ ಕುಂಡಗಳು ಇದ್ದು ಅದರಲ್ಲಿ ಗಾಂಜಾ ಗಿಡಗಳನ್ನು ಬೆಳೆದಿದ್ದವು. ಸದರಿ ಗಾಂಜಾ ಬೆಳೆದ ಕುಂಡಗಳು ಫ್ಲ್ಯಾಟ್ ನ ಬಾಲ್ಕನಿಯಲ್ಲಿ ಇದ್ದವು. ಸದರಿ ಫ್ಲ್ಯಾಟ್ ಯಾರ ಮಾಲೀಕತ್ವದ್ದು ಎಂದು ನಾನು ಪತ್ತೆ ಹಚ್ಚಿರುವುದಿಲ್ಲ. ನನ್ನ ತನಿಖೆ ಕಾಲದಲ್ಲಿ ಸದರಿ ಫ್ಲ್ಯಾಟ್ ನ ಮಾಲೀಕರು ಯಾರು ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. ಕುಂಡಗಳಿಂದ ಕಿತ್ತ ಗಾಂಜಾ ಗಿಡಗಳು ಎಷ್ಟು ತೂಕ ಇತ್ತು ಎಂದು ತೂಕ ಮಾಡಿ ನೋಡಿರುವುದಿಲ್ಲ. ನಾನು ಹೇಳಿದಂತೆ ಬಾಲ್ಕನಿಯಲ್ಲಿ ಯಾವುದೇ ಕುಂಡಗಳಲ್ಲಿ ಗಾಂಜಾ ಗಿಡಗಳನ್ನು ಬೆಳೆದಿರುವುದಿಲ್ಲ ಎನ್ನುವುದು ಸರಿಯಲ್ಲ. ಈ ಪ್ರಕರಣಕ್ಕಾಗಿ ನಾನು ಸದರಿ ಗಾಂಜಾ ಗಿಡಗಳನ್ನು ಸೇರಿಸಿದ್ದೇನೆ ಎನ್ನುವುದು ಸರಿಯಲ್ಲ.

6) ಸದರಿ ದಿನ ನಾನು ಆದಿತಿ ಅಪಾರ್ಟಮೆಂಟ್ ನ ಫ್ಲ್ಯಾಟ್ ನಂಬ್ರ 2 ಕ್ಕೆ ಪಂಚರ , ಪತ್ರಾಂಕಿತ ಅಧಿಕಾರಿ ಮತ್ತು ಸಿಬ್ಬಂದಿಗಳೊಡನೆ ದಾಳಿ ಮಾಡಿಲ್ಲ ಎನ್ನುವುದು ಸರಿಯಲ್ಲ. ಸದರಿ ಫ್ಲ್ಯಾಟನಲ್ಲಿ

ಆರೋಪಿ ವಾಸವಾಗಿರಲಿಲ್ಲ ಎನ್ನುವುದು ಸರಿಯಲ್ಲ. ಸದರಿ ದಿನ ಪ್ಲಾಟ್ ನಿಂದ ಎಂಒ -1 ರಿಂದ 54 ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ. ಆರೋಪಿಯನ್ನು ನಾನು ವೈದ್ಯಾಧಿಕಾರಿಗಳ ಮುಂದೆ ಗಾಂಜಾ ಸೇವನೆ ಬಗ್ಗೆ ಖಚಿತಪಡಿಸಲು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ. ನಾನು ಸದರಿ ದಿನ ಬೆಳಗ್ಗಿನ ಸುಮಾರು 11 ಗಂಟೆಗೆ ಆರೋಪಿಯನ್ನು ವೈದ್ಯಾಧಿಕಾರಿಗಳ ಮುಂದೆ ಹಾಜರುಪಡಿಸಿರಬಹುದಾಗಿದೆ. ಆರೋಪಿ ನನ್ನ ಮುಂದೆ ಸ್ವಇಚ್ಛಾ ಹೇಳಿಕೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಚಾಸಾ -9 ರಿಂದ 16 ರಂತೆ ಯಾವುದೇ ಸಾಕ್ಷಿದಾರರು ಇರದಿದ್ದರೂ ಸಹ ಅವರ ಹೇಳಿಕೆಗಳನ್ನು ಪಡೆದಿದ್ದೇನೆ ಎಂದು ಸೃಷ್ಟಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾ -9 ರಿಂದ 16 ಕಾಲ್ಪನಿಕ ವ್ಯಕ್ತಿಗಳು ಎನ್ನುವುದು ಸರಿಯಲ್ಲ. ನಾನು ಚಾಸಾ -2 ರಿಂದ 8 ಇವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎನ್ನುವುದು ಸರಿಯಲ್ಲ. ಎಂಒ -1 ರಿಂದ 54 ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ನಾನು ಆರೋಪಿ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.